ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ.ಸಂಖ್ಯೆ **834/2024**

ಪಿರ್ಯಾದಿ ಃ ಎನ್. ಹೆಚ್. ಚಂದ್ರೇಗೌಡ,
ವಯಸ್ಸು ಸುಮಾರು 8 ವರ್ಷ,
ಬಿನ್ ಹುಚ್ಚೇಗೌಡ,
ವಾಸಃ ನಂದೀಪುರ ಗ್ರಾಮ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ ಃ ಮಹಾದೇವ ನಾಯ್ಕ್,
ವಯಸ್ಸು ಸುಮಾರು 55 ವರ್ಷ,
ಬಿನ್ ಪುಟ್ಟಾನಾಯ್ಕ್
ವಾಸಃ ಕೆ.ಕೆ.ತಾಂಡ,
ಹೂವಿನಹಡಗಲಿ ತಾಲ್ಲೂಕು,
ಬಳ್ಳಾರಿ ಜಿಲ್ಲೆ.

ಆಪಾದನೆಯ ಸಾರಾಂಶ

ಶ್ರೀ ವಿಶ್ವನಾಥ್.ಎ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಪಿರ್ಯಾದಿಯ ತೋಟಕ್ಕೆ ಕೆಲಸಗಾರರನ್ನು ಪೂರೈಸುವವರಾಗಿದ್ದು, ದಿನಾಂಕ 10.05.2023 ರಂದು ಪಿರ್ಯಾದಿಯನ್ನು ಸಂಪರ್ಕಿ, ಅವರ ತೋಟಕ್ಕೆ ಕೆಲಸ ಮಾಡಲು ಕೆಲಸಗಾರರನ್ನು ಪೂರೈಸುವುದಾಗಿ ಪಿರ್ಯಾದಿಯಿಂದ ಮುಂಗಡವಾಗಿ ಡಿಸೆಂಬರ್ 2023 ನೇ ಸಾಲಿನಲ್ಲಿ ಮುಂಗಡವಾಗಿ ರೂ.3,00,000/- ಹಣವನ್ನು ಪಡೆದು, ನಂತರ ಕೆಲಸಗಾರರನ್ನು ಪೂರೈಸಲು ವಿಫಲರಾದ ಕಾರಣ ಸದರಿ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಾಡ್ಲಿಗೇರಿ ಶಾಖೆಯ ಚೆಕ್ 324538, ದಿನಾಂಕ 04.04.2024, ರೂ.3,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ಖಾತೆಯನ್ನು ಮುಚ್ಚಲಾಗಿದೆ (Account Closed) ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 10.04.2024 ರಂದು ನೋಟೀಸ್ ಮೂಲಕ ಆರೋಪಿಯಾದ

ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರ: 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರ:

ಪ್ರ: 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

(ಆರೋಪಿಗೆ ದಿನಾಂಕ 03.10.2024 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd/-**

ಮೂಡಿಗೆರೆ
ದಿನಾಂಕ: 03.10.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.